O.S.194/2011
DW-2

**ಸಾಕ್ಷಿಯನ್ನು ದಿನಾಂಕ 25-03-2026 ರಂದು ಕರೆಸಿ ಸತ್ಯ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲುಃ- ವಾದಿ ಪರ ಶ್ರೀ BLN ವಕೀಲರಿಂದಃ</u>**

**1.** ನಾನು ವ್ಯವಸಾಯ ಮತ್ತು ಪತ್ರಿಕೆ ವರದಿಗಾರನಾಗಿ ಕೆಲಸ ಮಾಡುತ್ತಿರುತ್ತೇನೆ. 1 ಮತ್ತು 2 ನೇ ವಾದಿಗಳು ಈ ದಾವೆಯನ್ನು 1 ನೇ ಪ್ರತಿವಾದಿ ವಿರುದ್ಧ ಹೂಡಿರುತ್ತಾರೆ. ಈ ದಾವೆಯಲ್ಲಿ ಯಾರು ಯಾರು ಪಕ್ಷಗಾರರಾಗಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಈ ದಾವೆಯನ್ನು ಸ.ನ.39/2 ವಿಸ್ತೀರ್ಣ 1 ಎಕರೆ 20 ಗುಂಟೆಗೆ ಸಂಬಂಧಿಸಿದಂತೆ ಸಲ್ಲಿಸಿರುತ್ತಾರೆ. ಸದರಿ 1 ಎಕರೆ 20 ಗುಂಟೆಯ ಚಕ್ಕುಬಂದಿ ಪೂರ್ವಕ್ಕೆ ನಾರಾಯಣಪ್ಪನ ಜಮೀನು, ಪಶ್ಚಿಮಕ್ಕೆ ಗುರುಮಲ್ಲಯ್ಯರವರ ಜಮೀನು, ದಕ್ಷಿಣಕ್ಕೆ ಉಪ್ಪಾರಹಳ್ಳಿ ರಂಗಪ್ಪ ಮತ್ತು ಗುರುಮಲ್ಲಯ್ಯರವರಿಗೆ ಸೇರಿದ ಜಮೀನು, ಉತ್ತರಕ್ಕೆ ,ಚಿಕ್ಕತಾಯಮ್ಮನ ಜಮೀನು ಬರುತ್ತದೆ. ಸದರಿ ಜಮೀನನ್ನು 1 ನೇ ಪ್ರತಿವಾದಿ ಕ್ರಯಕ್ಕೆ ಪಡೆದಿರುತ್ತಾರೆ. ದಾವಾ ಆಸ್ತಿಯಲ್ಲಿ ವಾದಿಗಳು ಸ್ವಾಧೀನದಲ್ಲಿರುವುದಿಲ್ಲ. 1967 ನೇ ಸಾಲಿನಿಂದಲೂ ದಾವಾ ಆಸ್ತಿಯಲ್ಲಿ ವಾದಿಗಳು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ.

**2.** 2 ಮತ್ತು 3 ನೇ ಪ್ರತಿವಾದಿಗಳು ನನ್ನ ಸಂಬಂಧಿಕರೆಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಸೋದರಮಾವ ಎಂದರೆ ಸರಿ. ನನ್ನ ತಾತ ಮತ್ತು ಗುರುಸಿದ್ದಪ್ಪನ ಮಗ ಚಿಕ್ಕಸಿದ್ದಪ್ಪರವರು ಸಹೋದರರು. ನಾನು ಸದರಿ ಚಿಕ್ಕಸಿದ್ದಪ್ಪರವರನ್ನು ನೋಡಿರುತ್ತೇನೆ. ಸಂಜೀವಯ್ಯನ ಮಗ ಗೋವಿಂದಯ್ಯ ಯಾರೆಂದು ನನಗೆ ಗೊತ್ತಿಲ್ಲ. ಚಿಕ್ಕರಂಗಪ್ಪನ ಅಣ್ಣತಮ್ಮಂದಿರು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ. ಚಿಕ್ಕರಂಗಪ್ಪರವರನ್ನು ನಾನು ನೋಡಿರುವುದಿಲ್ಲ. ಸದರಿ ಚಿಕ್ಕರಂಗಪ್ಪರವರು ಯಾವ ಗ್ರಾಮದವರೆಂದು ನನಗೆ ಗೊತ್ತಿಲ್ಲ. ಚಿಕ್ಕರಂಗಪ್ಪರವರ ಕುಟುಂಬ ಮತ್ತು ಅವರ ಕುಟುಂಬಕ್ಕೆ ಸೇರಿದ ಆಸ್ತಿಗಳ ಬಗ್ಗೆ ನನಗೇನು ಗೊತ್ತಿಲ್ಲ ಎಂದರೆ ಸರಿ. ಸದರಿ ಚಿಕ್ಕರಂಗಪ್ಪ ಮತ್ತು ಅವರ ಸಹೋದರರು ವಿಭಾಗವನ್ನು ಮಾಡಿಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ಚಿಕ್ಕರಂಗಪ್ಪನ ತಮ್ಮ ದೊಡ್ಡಯ್ಯ ಎಂದರೆ ನನಗೆ ಗೊತ್ತಿಲ್ಲ.

**3.** ನನ್ನ ಸಾಕ್ಷ್ಯ ಪ್ರಮಾಣಪತ್ರದ ಅಂಶಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಚಿಕ್ಕರಂಗಪ್ಪನ ತಮ್ಮ ದೊಡ್ಡಯ್ಯ ಎಂದು ನನ್ನ ಸಾಕ್ಷ್ಯ ಪ್ರಮಾಣದಲ್ಲಿ ನಾನೇ ಹೇಳಿ ಬರೆಸಿರುತ್ತೇನೆ. ಸದರಿ ಚಿಕ್ಕರಂಗಪ್ಪ ಮತ್ತು ದೊಡ್ಡಯ್ಯರವರಿಗೆ ವಿಭಾಗದಲ್ಲಿ ಯಾವ ಯಾವ ಆಸ್ತಿಗಳು ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಚಿಕ್ಕಸಿದ್ದಪ್ಪ ಮತ್ತು ಸಂಜೀವಯ್ಯರವರಿಗೆ ಕರಿಯಪ್ಪನ ಮಗ ದೊಡ್ಡಯ್ಯರವರ ಕಡೆಯಿಂದ ಯಾವ ಆಸ್ತಿ ಕ್ರಯವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ರೀತಿ ಕ್ರಯವಾದ ಸ.ನಂಬರ್ ಹಾಗೂ ಚಕ್ಕುಬಂದಿ ನನಗೆ ಗೊತ್ತಿಲ್ಲ ಎಂದರೆ ಸರಿ. ಕರಿಯಪ್ಪನ ಮಗ ಚಿಕ್ಕರಂಗಪ್ಪರವರು ದಾವಾ ಆಸ್ತಿಯನ್ನು **1** ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ. ನಾನು ಎಸಿ ನ್ಯಾಯಾಲಯದಲ್ಲಿ ನನ್ನ ಮೇಲ್ಮನವಿಯಲ್ಲಿ ಹಾಜರಾದಾಗ **1** ನೇ ಪ್ರತಿವಾದಿ ಹೆಸರಿಗೆ ಆದ ಕ್ರಯಪತ್ರದ **xerox** ಪ್ರತಿಯನ್ನು ಎ ಸಿ ನ್ಯಾಯಾಲಯದಲ್ಲಿ ನೋಡಿರುತ್ತೇನೆ. ನಂತರ ನಾನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಪತ್ರಗಳನ್ನು ನೋಡಿರುವುದಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಯಾರು ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**4.** ನನ್ನ ಹಾಗೂ ವಾದಿಗಳ ನಡುವೆ ಮೊದಲಿನಿಂದಲೂ ದೇವಸ್ಥಾನದ ವಿಚಾರವಾಗಿ ದ್ವೇಷ ಇರುತ್ತದೆ ಎಂದರೆ ಸರಿಯಲ್ಲ. ನಾನು **1** ಮತ್ತು **10** ನೇ ಪ್ರತಿವಾದಿಗಳ ಪರವಾಗಿ ಸಾಕ್ಷಿ ನುಡಿದಿರುತ್ತೇನೆಂದರೆ ಸರಿ. ನನಗೆ ಈ ಕೇಸಿನ ಬಗ್ಗೆ ಏನು ಗೊತ್ತಿಲ್ಲದೇ ಇದ್ದರೂ **10** ನೇ ಪ್ರತಿವಾದಿ ಹೇಳಿದ ಹಾಗೆ ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ತಯಾರು ಮಾಡಿದ್ದ, ಅದರಂತೆ ನಾನು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಯನ್ನು **1** ನೇ ಪ್ರತಿವಾದಿ **1963** ನೇ ಸಾಲಿನಲ್ಲಿ ಚಿಕ್ಕಸಿದ್ದಪ್ಪ ಮತ್ತು ಸಂಜೀವಯ್ಯರವರಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ನಂತರ ಗೋವಿಂದಯ್ಯರವರು ದಾವಾ ಆಸ್ತಿಯಲ್ಲಿನ ಅವರ ಅರ್ಧ ಭಾಗದ ಹಕ್ಕನ್ನು ಚಿಕ್ಕಸಿದ್ದಪ್ಪರವರಿಗೆ ಮಾರಾಟ ಮಾಡಿರುತ್ತಾರೆಂದರೆ ನನಗೆ ಗೊತ್ತಿಲ್ಲ. ತದನಂತರ ಚಿಕ್ಕಸಿದ್ದಪ್ಪರವರು ದಾವಾ ಆಸ್ತಿಗೆ ಮಾಲೀಕರಾಗಿದ್ದು ದಿ:**20.09.1967** ರಂದು **2** ನೇ ವಾದಿಗೆ ಕ್ರಯಪತ್ರವನ್ನು

ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಅದಿನಿಂದ ಇಲ್ಲಿಯವರೆಗೆ ದಾವಾ ಆಸ್ತಿಯಲ್ಲಿ ವಾದಿಗಳು ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. **1** ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ.

**5.** ದಾವಾ ಆಸ್ತಿಯ ಪೂರ್ವಕ್ಕೆ ಸದರಿ ಸ.ನಂಬರ್ ನಲ್ಲಿ **1** ನೇ ಪ್ರತಿವಾದಿ ದೊಡ್ಡಯ್ಯರವರಿಗೆ ಸೇರಿದ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನಿಗೆ **1** ನೇ ಪ್ರತಿವಾದಿ ಮಾಲೀಕರಾಗಿ ಅನುಭವಿಸಿಕೊಂಡು ಬರುತ್ತಿರುತ್ತಾರೆಂದರೆ ಸರಿಯಲ್ಲ. ಆ ಬಗ್ಗೆ ನನಗೆ ಗೊತ್ತಿದ್ದರೂ ದಾವಾ ಆಸ್ತಿಯಲ್ಲಿ **1** ನೇ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓದಿ ಹೇಳಿ ಕೇಳಿ ಸರಿ ಇರುತ್ತದೆ.**

**ಸಿ.ಜೆ. ಮತ್ತು ಪ್ರ.ದ.ನ್ಯಾದಂ.**
**ಕೊರಟಗೆರೆ**

O.S.194/2011
DW-2

Witness of the Plaintiff by name Vijay R present, filed affidavit in lieu of chief examination and examined as DW-2.

Sri. HVS prays time.

For cross of DW 2 by 07.04.2026.

Civil Judge and JMFC.
*Koratagere.*